ಅರಭಾವಿ ಕ್ಷೇತ್ರದಲ್ಲಿ ಮೂಡಲಗಿ ಕುಲಗೋಡ ಗ್ರಾಮಗಳಲ್ಲಿ ಕ.ರಾ.ರ.ಸಾ. ಸಂಸ್ಥೆಯ ವಾಹನ ನಿಲ್ದಾಣ ನಿರ್ಮಾಣ

೮೪೭. ಶ್ರೀ ಆರ್. ಎಂ. ಪಾಟೀಲ್ (ಅರಭಾವಿ).—ಮಾನ್ಯ ಸಾರಿಗೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಅರಭಾವಿ ಕ್ಷೇತ್ರದಲ್ಲಿ ಮೂಡಲಗಿ ಕುಲಗೋಡ ಗ್ರಾಮಗಳಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಾಹನ ನಿಲ್ದಾಣವನ್ನು ನಿರ್ಮಿಸಲು ಸರ್ಕಾರದವರು ಉದ್ದೇಶಿಸಿದ್ದಾರೆಯೇ ?

ಆ) ಮೇಲ್ಕಂಡ ಸ್ಥಳಗಳಲ್ಲಿ ಬಸ್ ನಿಲ್ದಾಣಗಳನ್ನು ನಿರ್ಮಿಸಲು ೧೯೮೯–೯೦ರ ಆಯವ್ಯಯದಲ್ಲಿ ಸೇರಿಸಲಾಗುವುದೇ ?

ಇ) ಹಾಗಿದ್ದಲ್ಲಿ ಅವುಗಳ ಅಂದಾಜು ವೆಚ್ಚವೆಷ್ಟು ಹಾಗೂ ಸದರೀ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಸಿದ್ಧರಾಮಯ್ಯ (ಸಾರಿಗೆ ಮಂತ್ರಿಗಳು).—

ಅ) ಹೌದು

ಆ) ೧೯೮೯–೯೦ರ ಪರಿಷ್ಕೃತ ಆಯವ್ಯಯದಲ್ಲಿ ಸೇರಿಸಲು ಪರಿಗಣಿಸಲಾಗುವುದು.

ಇ) ಅಂದಾಜು ವೆಚ್ಚ ಪ್ರತಿಯೊಂದಕ್ಕೆ ೩ ಲಕ್ಷ ರೂಪಾಯಿಗಳು ಪರಿಷ್ಕೃತ ಆಯವ್ಯಯದಲ್ಲಿ ಸೇರ್ಪಡೆಯಾದ ನಂತರ ಕೆಲಸವನ್ನು ಪ್ರಾರಂಭಿಸಲಾಗುವುದು.

ರಾಜ್ಯದಲ್ಲಿರುವ ಕ್ರೀಡಾ ಶಾಲೆ ಹಾಗೂ ಕ್ರೀಡಾ ಹಾಸ್ಟೆಲುಗಳು

೮೮೯. ಶ್ರೀ ವಸಂತ ಬಂಗೇರ (ಬೆಳ್ತಂಗಡಿ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ರಾಜ್ಯದಲ್ಲಿರುವ ಕ್ರೀಡಾಶಾಲೆಗಳು ಮತ್ತು ಕ್ರೀಡಾ ಹಾಸ್ಟೆಲ್‌ಗಳು ಎಷ್ಟು ?

೨) ಅರ್ಹತೆ ಇದ್ದರೂ ಕ್ರೀಡಾಪಟುಗಳಿಗೆ ಪ್ರವೇಶ ದೊರಕದಿರಲು ಕಾರಣವೇನು ?

೩) ಕ್ರೀಡಾ ಶಾಲೆಗಳಲ್ಲಿ ಕ್ರೀಡಾಪಟುಗಳಿಗೆ ಕೊಡಲಾಗುವ ದಿನ ನಿತ್ಯದ ಆಹಾರದಲ್ಲಿ ಏರುಪೇರಿರುವುದು ಹಾಗೂ ಇತರ ಸೌಲಭ್ಯಗಳು ಕ್ಲಿಪ್ತ ಸಮಯದಲ್ಲಿ ದೊರಕುವುದಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

೪) ಕೂಡಿಗೆ ಕ್ರೀಡಾಶಾಲೆಯಲ್ಲಿ ಈ ರೀತಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

೫) ಈ ರೀತಿ ಅವ್ಯವಸ್ಥೆ ಆಗದಂತೆ ತಡೆಯಲು ಇನ್ನು ಮುಂದಾದರೂ ಕ್ರಮಕೈಗೊಳ್ಳಲಾಗುವುದೇ ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಮಾಜ ಕಲ್ಯಾಣ ಮಂತ್ರಿಗಳು).—

೧) ಪ್ರಸ್ತುತ ರಾಜ್ಯದಲ್ಲಿ ೭ ಕ್ರೀಡಾನಿಲಯಗಳು ೫೫ ಕ್ರೀಡಾ ವಿಭಾಗಗಳು ೧ ಕ್ರೀಡಾ ಶಾಲೆ ಅಸ್ತಿತ್ವದಲ್ಲಿರುತ್ತವೆ.

೨) ಅರ್ಹತೆ ಇದ್ದ ಕ್ರೀಡಾಪಟುಗಳನ್ನು ತಾಲ್ಲೂಕು ಮಟ್ಟದಿಂದ ರಾಜ್ಯಮಟ್ಟದವರೆಗೆ ತಾಂತ್ರಿಕವಾಗಿ ಅರ್ಹರಾದ ತರಬೇತಿದಾರರು ಆಯ್ಕೆ ಪರೀಕ್ಷೆಯನ್ನು ನಡೆಸಿ ಕ್ರೀಡಾ ಶಾಲೆಗಳಿಗೆ ಪ್ರವೇಶ ನೀಡುತ್ತಾರೆ.

೩) ಹೌದು

೪) ಕ್ರೀಡಾಶಾಲೆಗಳಲ್ಲಿ ನೀಡುತ್ತಿರುವ ಆಹಾರ ಹಾಗೂ ಸೌಲಭ್ಯಗಳನ್ನು ಉತ್ತಮ ಪಡಿಸಲು ಕ್ರಮಕೈಕೊಳ್ಳಲಾಗಿದೆ.

೫) ಹೌದು.